ಕೊಳ್ಳೆಗಾಲ ತಾಲ್ಲೂಕು ಕುಂತೂರು ಸಕ್ಕರೆ ಕಾರ್ಖಾನೆಯ ಅವ್ಯವಹಾರ

614(800) ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮರಳ್ಳಿ) ಮಾನ್ಯ ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳ್ಳೆಗಾಲ ತಾಲ್ಲೂಕು ಕುಂತೂರು ಸಕ್ಕರೆ ಕಾರ್ಖಾನೆಯು ಯಾವ ದಿನಾಂಕದಿಂದ ಮುಚ್ಚಲ್ಪಟ್ಟಿದೆ. ಸದರಿ ಕಾರ್ಖಾನೆಯಲ್ಲಿ ಒಳಪಡುವ ಕಬ್ಬು ಬೆಳೆಗಾರರು ನೀಡಿರುವ ಕಬ್ಬಿನ ಮೊಬಲಗು ಎಷ್ಟು; ಈ ಬೆಳೆಗಾರರಿಗೆ ಪೂರ್ತಿ ಮೊಬಲಗನ್ನು ಪಾವತಿ ಮಾಡಲಾಗಿದೆಯೇ; ಇಲ್ಲದೇ ಇದ್ದಲ್ಲಿ ಪೂರ್ತಿ ಮೊಬಲಗನ್ನು ಪಾವತಿ ಮಾಡಲು ತೆಗೆದುಕೊಂಡಿರುವ ಕ್ರಮಗಳೇನು? ವಿವರ ನೀಡುವುದು?

ಆ) ಕಬ್ಬು ಬೆಳೆಗಾರರಿಗೆ ನೀಡಬೇಕಾಗಿರುವ ಮೊಬಲಗು ಎಷ್ಟು, ಬೆಳೆಗಾರರ ವಿವರ ನೀಡುವುದು?

ಇ) ಈ ಕಾರ್ಖಾನೆಯು ಮುಚ್ಚಿದ ನಂತರ ಬೆಳೆಗಾರರ ಅನುಕೂಲಕ್ಕಾಗಿ ಪಕ್ಕದ ದಿಂದಲೆ ಬನ್ನಾರಿಅಮ್ಮನ್ ಸಕ್ಕರೆ ಕಾರ್ಖಾನೆಗೆ ಕಬ್ಬು ಸರಬರಾಜು ಮಾಡುವ ಆದೇಶ ನೀಡಲಾಗಿದೆಯೇ? ಇಲ್ಲದೇ ಇದ್ದಲ್ಲಿ ಕಬ್ಬು ಬೆಳೆಗಾರರಿಗೆ ಅನುಕೂಲವಾಗುವಂತೆ ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗಿದೆ (ವಿವರಗಳನ್ನು ನೀಡುವುದು)

ಈ) ಮುಷ್ಕರ ನಿರತ ಕಬ್ಬು ಬೆಳೆಗಾರರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಾಗಿದೆಯೇ?

ಉ) ಹಣ ನೀಡದೇ ಹಾಗೂ ಅಕ್ರಮ ಸಕ್ಕರೆ ಸಾಗಾಣಿಕೆ ಬಗ್ಗೆ ಕಾರ್ಖಾನೆಯ ಆಡಳಿತ ವರ್ಗದವರ ಮೇಲೆ ಮೊಕದ್ದಮೆ ದಾಖಲಾಗಿದೆಯೇ? (ವಿವರ ನೀಡುವುದು)

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು)

ಅ) ಕೊಳ್ಳೆಗಾಲ ತಾಲ್ಲೂಕು ಕುಂತೂರು ಸಕ್ಕರೆ ಕಾರ್ಖಾನೆಯು ಆಗಸ್ಟ್ 2001 ರಿಂದ ಮುಚ್ಚಲ್ಪಟ್ಟಿದೆ.

ಸದರಿ ಕಾರ್ಖಾನೆಗೆ ಕಬ್ಬು ಬೆಳೆಗಾರರು ನೀಡಿರುವ ಕಬ್ಬಿನ ಮೊಬಲಗು ದಿನಾಂಕ 18.9.2000 ರಿಂದ 1.5.2001ರ ವರೆಗೆ ರೂ. 19,72,56,000 ಗಳಾಗಿರುತ್ತದೆ.

ಕಾರ್ಖಾನೆಯು ಕಬ್ಬು ಬೆಳೆಗಾರರಿಗೆ ಪೂರ್ತಿ ಮೊಬಲಗನ್ನು ನಿಗಧಿತ ಅವಧಿಯೊಳಗೆ ಪಾವತಿ ಮಾಡದೇ ಇದ್ದುದರಿಂದ ಕಬ್ಬು ನಿಯಂತ್ರಣ ಆದೇಶದನ್ವಯ ಸಕ್ಕರೆ ನಿರ್ದೇಶಕರು ಕಬ್ಬಿನ ಬಾಕಿಯನ್ನು ಭೂಕಂದಾಯ ಬಾಕಿ ರೂಪದಲ್ಲಿ ವಸೂಲಿ ಮಾಡಿ ಸಂಬಂಧಪಟ್ಟ ರೈತರಿಗೆ ಪಾವತಿಸಲು ದಿ: 25.2.2001ರಲ್ಲಿ ಆದೇಶ ಹೊರಡಿಸಿ ಜಿಲ್ಲಾಧಿಕಾರಿ ಚಾಮರಾಜನಗರ ಜಿಲ್ಲೆ ಇವರಿಗೆ ಅಧಿಕಾರ ನೀಡಿರುತ್ತಾರೆ ಇದರಂತೆ ಜಿಲ್ಲಾಧಿಕಾರಿಗಳು ಕಾರ್ಖಾನೆಯ ಚರ ಮತ್ತು ಸ್ಥಿರ ಆಸ್ತಿಗಳನ್ನು ಜಪ್ತಿ ಮಾಡಿ ಹರಾಜು ಮಾಡಿ ಮೊಬಲಗನ್ನು ಪಾವತಿಸಲು ಕ್ರಮ ಕೈಗೊಂಡಿರುತ್ತಾರೆ.

ಆ) 1713 ಜನ ಕಬ್ಬು ಬೆಳೆಗಾರರಿಗೆ ರೂ. 535 ಲಕ್ಷ ಬಾಕಿ ಇರುತ್ತದೆ.

ಇ) ಕುಂತೂರು ಸಕ್ಕರೆ ಕಾರ್ಖಾನೆ ಮುಚ್ಚಿದ ನಂತರ ಕಬ್ಬು ಬೆಳೆಗಾರರ ಅನುಕೂಲಕ್ಕಾಗಿ ಪಕ್ಕದ ಬನ್ನಾರಿ ಅಮ್ಮನ್ ಸಕ್ಕರೆ ಕಾರ್ಖಾನೆಗೆ ಕಬ್ಬು ಸರಬರಾಜು ಮಾಡುವಂತೆ ಆದೇಶ ನೀಡಿರುವುದಿಲ್ಲ. ಕಬ್ಬು ಬೆಳೆಗಾರರು ಕಾ. ಬೇರೆ ಕಾರ್ಖಾನೆಗೆ ಕಬ್ಬು ಸರಬರಾಜು ಮಾಡುವುದಕ್ಕೆ ಅವಕಾಶ ನೀಡಲು ಕೋರಿ ಅರ್ಜಿ ಸಲ್ಲಿಸಿರುವವರಿಗೆ ಜಿಲ್ಲಾಧಿಕಾರಿ ಚಾಮರಾಜನಗರ ಇವರು ಕಬ್ಬು ಬೆಳೆಗಾರರ ಅರ್ಜಿ ಮೇರೆಗೆ ಅವಕಾಶ ಕಲ್ಪಿಸಿರುತ್ತಾರೆ.

ಈ) ಮುಷ್ಕರ ನಿರತ ಕಬ್ಬು ಬೆಳೆಗಾರರ ಮೇಲೆ ಯಾವುದೇ ಕ್ರಿಮಿನಲ್ ಮೊಕದ್ದಮೆಗಳು ದಾಖಲಾಗಿಲ್ಲವೆಂದು ಪೋಲೀಸ್ ಇಲಾಖೆಯಿಂದ ವಿವಾದ ತಿಳಿದು ಬಂದಿರುತ್ತದೆ. ಆದರೆ ಕಾರ್ಖಾನೆ ಮುಚ್ಚುವುದಕ್ಕೆ ಮೊದಲು ಅಂದರೆ ದಿನಾಂಕ; 27.3.2001ರಂದು ಸಂತೇಮಾರನಹಳ್ಳಿ ಕಬ್ಬು ಬೆಳೆಗಾರರು (ಕುಂತೂರು ಕಾರ್ಖಾನೆಗೆ ಸೇರಿದ) ಕಛೇರಿಯಲ್ಲಿ ಕಬ್ಬು ಬೆಳೆಗಾರರು ಹಣ ಪಾವತಿಸದೆ ಇರುವುದಕ್ಕೆ ಗಲಾಟೆ ನಡೆಸಿರುವುದಕ್ಕೆ 48 ಜನರು ವಿರುದ್ಧ ಐಪಿಸಿ ಕಲಂ. 143,342,149ರ ರೀತ್ಯ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಾಗಿರುತ್ತದೆಂದು ತಿಳಿದು ಬಂದಿದೆ.

ಉ) ಹಣ ನೀಡದಿರುವ ಬಗ್ಗೆ ಯಾವುದೇ ಮೊಕದ್ದಮೆ ಹೂಡಿರುವುದಿಲ್ಲ. ಹಾಗೂ ಆಡಳಿತ ವರ್ಗ ಅಕ್ರಮವಾಗಿ ಸಕ್ಕರೆ ಸಾಗಾಣಿಕೆ ಮಾಡಿರುವ ಬಗ್ಗೆ ಯಾವುದೇ ದೂರುಗಳು ಬಂದಿರುವುದಿಲ್ಲ.

ಬ್ಯಾಕ್‌ಲಾಗ್ ಹುದ್ದೆಗಳ ವಿವರ

615(801) ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮರಳ್ಳಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ತುಂಬ ಬೇಕಾಗಿರುವ ಬ್ಯಾಕ್‌ಲಾಗ್ ಹುದ್ದೆಗಳು ಎಷ್ಟು? (ಇಲಾಖಾವಾರು ವಿವರಗಳನ್ನು ನೀಡುವುದು)

ಆ) ಈ ಹುದ್ದೆಗಳನ್ನು ಯಾವಾಗ ತುಂಬಲಾಗುವುದು? ಈ ಹಿಂದೆ ನಿಗಧಿಪಡಿಸಿದ್ದ ಸಮಯದಲ್ಲಿ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲಾಗಿದೆಯೇ? ಇಲ್ಲದೆ ಇದ್ದಲ್ಲಿ ಕಾರಣವೇನು? (ವಿವರ ನೀಡುವುದು)

ಇ) ಬ್ಯಾಕ್ ಲಾಗ್ ಹುದ್ದೆಗಳಿಗಾಗಿ ನೊಂದಣಿ ಮಾಡಿರುವವರ ಸಂಖ್ಯೆ ಎಷ್ಟು? ಈ ಹುದ್ದೆಗಳನ್ನು ಯಾವ ಮಾನದಂಡದ ಆಧಾರದ ಮೇಲೆ ತುಂಬಲಾಗಿದೆ? (ವಿವರ ನೀಡುವುದು)

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಇಲಾಖಾವಾರು ಮಾಹಿತಿಯು ಅನುಬಂಧದಲ್ಲಿದೆ. ಗುರುತಿಸುವ ಕಾರ್ಯವು ಮುಂದುವರಿಯುತ್ತಾ ಇದೆ.

ಆ) ನೇಮಕಾತಿ ಪ್ರಾಧಿಕಾರಿಗಳಿಗೆ ದಿ: 31.12.02ರ ಒಳಗೆ ತುಂಬಲು ನಿರ್ದೇಶನ ನೀಡಲಾಗಿದೆ.

ಇ) ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ನೊಂದಣಿ ಮಾಡುವ ಪ್ರಕ್ರಿಯೆ ಇರುವುದಿಲ್ಲ ನೇಮಕಾತಿ ಪ್ರಾಧಿಕಾರಿಗಳು ನೀಡುವ ಪತ್ರಿಕಾ ಪ್ರಕಟಣೆಗೆ ಅನುಗುಣವಾಗಿ ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬೇಕಾಗಿದೆ.